ಸಹಾಯಕ ಸರ್ಕಾರಿ ಅಭಿಯೋಜಕರುಗಳನ್ನು ಆಯ್ಕೆ ಮಾಡುತ್ತಿದ್ದು, ಈ ಹುದ್ದೆಗಳಿಗೆ ಸಂಬಂಧಪಟ್ಟಂತೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಬ್ಯಾಕ್‌ಲಾಗ್ ಹುದ್ದೆಗಳು ಬಾಕಿ ಉಳಿದಿರುವುದಿಲ್ಲ.

ವಾಹನಗಳಿಂದ ವಾಯುಮಾಲಿನ್ಯ

1009 (1138) ಶ್ರೀ ಅಂಜನಾಮೂರ್ತಿ (ನೆಲಮಂಗಲ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಾದ್ಯಂತ ಸಂಚರಿಸುತ್ತಿರುವ ವಾಹನಗಳಿಂದ ಹೊರಹೊಮ್ಮುತ್ತಿರುವ ಹೊಗೆಯಿಂದಾಗಿ ವಾಯು ಮಾಲಿನ್ಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಬಗ್ಗೆ ಮಾಲಿನ್ಯ ಪರೀಕ್ಷಾ ಮಂಡಳಿಯಿಂದ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಈ ಮಂಡಳಿಯ ಕೆಲಸವನ್ನು ಚುರುಕುಗೊಳಿಸಲು ಸರ್ಕಾರ ಕೈಗೊಂಡ ಕ್ರಮ ಏನು?

ಶ್ರೀ ಕೆ. ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಸಚಿವರು) :

ಅ) ಬಂದಿದೆ

ಆ) ವಾಹನಗಳ ಹೊಗೆಯಿಂದಾಗುವ ವಾಯುಮಾಲಿನ್ಯ ತಪಾಸಣೆ ಅಧಿಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಒಳಪಡುವುದಿಲ್ಲ. ಪೋಲೀಸ್ ಇಲಾಖೆ ಸಹಯೋಗದೊಂದಿಗೆ ಸಾರಿಗೆ ಇಲಾಖೆಯು ವಾಹನಗಳಿಂದಾಗುವ ವಾಯು ಮಾಲಿನ್ಯದ ತಪಾಸಣೆ ನಡೆಸುತ್ತಿರುತ್ತದೆ.

ಪಶುಸಂಗೋಪನೆ ಇಲಾಖೆಯಲ್ಲಿ ಜಾನುವಾರುಗಳಿಗೆ ಬಿಡುಗಡೆಯಾದ ಔಷಧಿಗಳು

1010 (1139) ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2000-2001ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದ್ಯಂತ ಜಾನುವಾರುಗಳ ಕಾಯಿಲೆಗಳನ್ನು ವಾಸಿ ಮಾಡಲು ಸರ್ಕಾರದಿಂದ ಬಿಡುಗಡೆಯಾದ ಔಷಧಿಗಳ ಮೊತ್ತವೆಷ್ಟು? ಯಾವ ಯಾವ ಜಿಲ್ಲೆಗಳಿಗೆ ಎಷ್ಟು ಮೊತ್ತದ ಔಷಧಿ ಬಿಡುಗಡೆಯಾಗಿದೆ?

ಆ) ಇಲಾಖೆಯಿಂದ ಬಿಡುಗಡೆಯಾದ ಔಷಧಿ ಗುಣಮಟ್ಟದಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ತಪ್ಪಿತಸ್ಥರ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಎ. ಕೃಷ್ಣಪ್ಪ (ಪಶುಸಂಹೋಪನೆ ಮತ್ತು ಸಕ್ಕರೆ ಸಚಿವರು) :

ಅ) 2000-2001ನೇ ಸಾಲಿನಲ್ಲಿ ಸರ್ಕಾರದಿಂದ ರೂ. 5,34,000-00 ಮತ್ತು ಜಿಲ್ಲಾ

ಪಂಚಾಯತ್ ಪತಿಯಿಂದ ರೂ. 2,45,76,000-00 ಬಿಡುಗಡೆ ಮಾಡಲಾಗಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧ- 1ರಲ್ಲಿ ನೀಡಲಾಗಿದೆ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಶ್ರೀ ಅಂಜನಾಮೂರ್ತಿ, ವಿಧಾನ ಸಭಾ ಸದಸ್ಯರು (ನೆಲಮಂಗಲ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ - 1139 (ಜಿಲ್ಲಾವಾರು ಔಷಧ ಮತ್ತು ರಾಸಯನಿಕಗಳ ವಂಟನದ ವಿವರ)

ಅನುಬಂಧ - 1

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಸರ್ಕಾರದಿಂದ ಒದಗಿಸಿರುವ ವಂಟನ	ಜಿಲ್ಲಾ ಪಂಚಾಯತ್‌ನಿಂದ ಒದಗಿಸಿರುವ ವಂಟನ
1	2	3	4
1.	ಬೆಂಗಳೂರು (ನಗರ)	8,09,000	15,00,000
2.	ಬೆಂಗಳೂರು (ಗ್ರಾಮಾಂತರ)	21,36,000	10,00,000
3.	ಕೋಲಾರ	26,70,000	15,00,000
4.	ತುಮಕೂರು	33,37,500	10,00,000
5.	ಶಿವಮೊಗ್ಗ	28,10,600	7,00,000
6.	ಚಿತ್ರದುರ್ಗ	18,77,800	10,00,000
7.	ದಾವಣಗೆರೆ	21,36,000	7,00,000
8.	ಮೈಸೂರು	23,21,700	5,00,000
9.	ಚಾಮರಾಜನಗರ	11,36,000	8,00,000
10.	ಮಂಡ್ಯ	21,36,000	20,00,000
11.	ಹಾಸನ	29,67,000	10,00,000
12.	ದಕ್ಷಿಣ ಕನ್ನಡ	14,05,200	10,00,000
13.	ಉಡುಪಿ	15,70,600	3,00,000
14.	ಚಿಕ್ಕಮಗಳೂರು	13,35,000	5,00,000

1	2	3	4
15.	ಕೊಡಗು	6,59,000	8,00,000
16.	ಬೆಳಗಾಂ	44,50,000	15,00,000
17.	ಧಾರವಾಡ	10,68,000	13,76,000
18.	ಹಾವೇರಿ	17,22,600	4,00,000
19.	ಗದಗ	9,53,500	10,00,000
20.	ಬಿಜಾಪುರ	16,18,100	10,00,000
21.	ಬಾಗಲಕೋಟೆ	17,80,000	6,00,000
22.	ಉತ್ತರ ಕನ್ನಡ	15,25,700	5,00,000
23.	ಗುಲ್ಬರ್ಗಾ	38,17,900	14,00,000
24.	ಬಳ್ಳಾರಿ	21,39,600	5,00,000
25.	ರಾಯಚೂರು	16,69,000	5,00,000
26.	ಕೊಪ್ಪಳ	17,22,500	3,00,000
27.	ಬೀದರ್	15,26,700	10,00,000
	ಒಟ್ಟು	**5,34,00,000**	**2,45,76,000**

ಪ್ರವಾಸೋದ್ಯಮ ಇಲಾಖೆಗೆ ಬಿಡುಗಡೆಯಾದ ಹಣ

1011 (1142) ಶ್ರೀ ಅಂಜನಾಮೂರ್ತಿ (ನೆಲಮಂಗಲ) : ಮಾನ್ಯ ಪ್ರವಾಸೋದ್ಯಮ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2000-2001ನೇ ಸಾಲಿನಲ್ಲಿ ಪ್ರವಾಸೋದ್ಯಮ ಇಲಾಖೆ ಪ್ರವಾಸಿಗರನ್ನು ಆಕರ್ಷಿಸಲು ಕೈಗೊಂಡ ಕಾರ್ಯಕ್ರಮಕ್ಕೆ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಿದೆ? ಜಿಲ್ಲಾವಾರು ಮಾಹಿತಿ ನೀಡುವುದು.

ಆ) ಯಾವ ಯಾವ ಜಿಲ್ಲೆಗಳಲಿಲ ಪ್ರವಾಸಿಗರ ಹಿತದೃಷ್ಟಿಯಿಂದ ಪ್ರವಾಸಿ ಕೇಂದ್ರಗಳ ರಸ್ತೆ ಅಭಿವೃದ್ಧಿಗಾಗಿ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಿದೆ? ಪೂರ್ಣ ಮಾಹಿತಿ ನೀಡುವುದು.

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಹಾಗೂ ಹಜ್ ಸಚಿವರು) :

ಅ) 2000-2001ನೇ ಸಾಲಿನಲ್ಲಿ ಪ್ರವಾಸೋದ್ಯಮ ಇಲಾಖೆಗೆ ಪ್ರವಾಸಿಗರನ್ನು ಆಕರ್ಷಿಸುವ ಕಾರ್ಯಕ್ರಮಗಳಿಗಾಗಿ ಒಟ್ಟು 350.00 ಲಕ್ಷ ರೂ.ಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ.